ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಎಸ್.ಸಿ ನಂ: **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಂಘಮೇಶ ಕುರಿ | ಪ್ರಾಸಾ: 9 |
| ತಂದೆಯ ಹೆಸರು | : | ಯಲ್ಲಪ್ಪ ಕುರಿ | ಚಾಸಾ: 30 |
| ಪ್ರಾಯ | : | 37 ವರ್ಷ | ದಿನಾಂಕ 12.06.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಮುಖ್ಯಪೇದೆ ಎಸ್ ಸಿ 2767, ರಾಮದುರ್ಗ ಪೋಲಿಸ ಠಾಣೆ | |
| ವಾಸಸ್ಥಳ | : | ರಾಮದುರ್ಗ | |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು **17.06.2022** ರಿಂದ **30.09.2024** ತನಕ ಸವದತ್ತಿ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ನನ್ನ ಪಿ ಸಿ ನಂಬರ್ **2767** ಆಗಿತ್ತು.

**2.** ದಿನಾಂಕ: **30.08.2022** ರಂದು ಸವದತ್ತಿ ಪೋಲಿಸ ಠಾಣೆಯ ಇನ್ಸಪೆಕ್ಟರ ಆಗಿದ್ದ ಚಾಸಾ-**31** ಜೆ ಕರುಣೇಶಗೌಡ ಇವರು ಈ ಕೇಸನಲ್ಲಿ ತನಿಖೆಯ ಕಾಲದಲ್ಲಿ ಸಂಗ್ರಹಿಸಿದ್ದ **14** ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೆ

ಒಳಪಡಿಸುವ ಬಗ್ಗೆ ಆರ್ ಎಫ್ ಎಸ್ ಎಲ್ ಹುಬ್ಬಳ್ಳಿ ತೆಗೆದುಕೊಂಡು ಹೋಗಿ ನೀಡುವಂತೆ ಕರ್ತವ್ಯದಲ್ಲಿ ನೇಮಕ ಮಾಡಿರುತ್ತಾರೆ. ಅದರಂತೆ ನಾನು ಅದೇ ದಿನ **14** ವಸ್ತುಗಳನ್ನು ತೆಗೆದುಕೊಂಡು ಹುಬ್ಬಳ್ಳಿ ಆರ್ ಎಫ್ ಎಸ್ ಎಲ್ ಗೆ ಹೋಗಿ ನೀಡಿರುತ್ತೇನೆ. ಸದರಿ ವಸ್ತುಗಳು ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಸೀಲ್ ಮಾಡಿದ್ದಾಗಿತ್ತು. ನಂತರ ಠಾಣೆಗೆ ವಾಪಸ್ಸಾಗಿ ಆ ಬಗ್ಗೆ ಸ್ವೀಕೃತಿಯನ್ನು ನನ್ನ ಮೇಲಾಧಿಕಾರಿಗಳಿಗೆ ವರದಿಯ ಜೊತೆಯಲ್ಲಿ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ನಾನು ನೀಡಿರುವ ವರದಿಯಾಗಿದ್ದು, ಅದನ್ನು ನಿಪಿ**-34** ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ**-34**(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯು ಆರ್ ಎಫ್ ಎಸ್ ಎಲ್ ಹುಬ್ಬಳ್ಳಿಯವರು ನೀಡಿರುವ ಸ್ವೀಕೃತಿ ಪತ್ರವಾಗಿದ್ದು, ಅದನ್ನು ನಿಪಿ**-35** ಎಂದು ಗುರುತಿಸಲಾಯಿತು. ನಾನು ಆರ್ ಎಫ್ ಎಸ್ ಎಲ್ ಹುಬ್ಬಳ್ಳಿಗೆ ತೆಗೆದುಕೊಂಡು ಹೋಗಿರುವ ವಸ್ತುಗಳನ್ನು ನೋಡಿದರೇ ನಾನು ಗುರುತಿಸಬಲ್ಲೆ. ಈಗ ನ್ಯಾಯಾಲಯದ ಮುಂದೆ ಇರುವ ಮುಮಾ**-1** ರಿಂದ **9** ಮತ್ತು ಮುಮಾ**-11** ರಿಂದ ಮುಮಾ**-15** ವಸ್ತುಗಳು ಈ ಮೇಲೆ ಹೇಳಿದಂತೆ ನಾನು ಆರ್‌ಎಫ್‌ಎಸ್‌ಎಲ್ ಹುಬ್ಬಳ್ಳಿಗೆ ನೀಡಿರುವ ವಸ್ತುಗಳಾಗಿರುತ್ತವೆ.

ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಪಿ ಜೆ ಜಿ (ಡಿ ಎಲ್ ಎಸ್ ಎ) ವಕೀಲರಿಂದಃ

**3.** ನನ್ನನ್ನು ಕರ್ತವ್ಯದಲ್ಲಿ ಲಿಖಿತ ಆದೇಶದ ಮೂಲಕ ಮಾತ್ರ ನೇಮಕ ಮಾಡಲಾಗುತ್ತದೆ ಎಂದರೆ ಸರಿಯಲ್ಲ. ವಸ್ತುಗಳನ್ನು ಆರ್‌ಎಫ್‌ಎಸ್‌ಎಲ್ ಹುಬ್ಬಳ್ಳಿಗೆ ತೆಗೆದುಕೊಂಡು ಹೋಗುವಾಗ ಸೀಲ್ ಮಾಡಿದ ಪ್ಯಾಕೇಟಗಳಲ್ಲಿ ಇದ್ದ ವಸ್ತುಗಳನ್ನು ನಾನು ಸ್ವತಃ ನೋಡಿಲ್ಲ. ಸದರಿ ವಸ್ತುಗಳನ್ನು ಆರ್‌ಎಫ್‌ಎಸ್‌ಎಲ್

ಹುಬ್ಬಳ್ಳಿಗೆ ತೆಗೆದುಕೊಂಡು ನಾನು ಹೋಗಿಲ್ಲ ಮತ್ತು ಈ ಕಾರಣದಿಂದ ಸದರಿ ಕರ್ತವ್ಯದಲ್ಲಿ ನನ್ನನ್ನು ನೇಮಕ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ನಿಪಿ-**34** ಮತ್ತು ನಿಪಿ-**35** ರಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಈಗ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುಹೇಳಿಕೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.